ಆ) ಯಾವ ಆಧಾರದ ಮೇಲೆ ಅವರಿಗೆ ಪರಿಹಾರ ನೀಡಲಾಗುತ್ತಿದೆ?

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು)

ಅ) ಭಾರತ ಸರ್ಕಾರದ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಮಾರ್ಗಸೂಚಿಯ ಪ್ರಕಾರ ಪರಿಹಾರ ನೀಡಲು ಅವಕಾಶಗಳಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

573(329) ಶ್ರೀ ಒಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 12ನೇ ವಿಧಾನ ಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ಸಹಕಾರ ಸಂಘಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ರೈತರಿಗೆ ನೀಡಿದ ಸಾಲದ ಮೇಲಿನ ಬಡ್ಡಿ ಹಣವನ್ನು ಮನ್ನಾ ಮಾಡಿದೆಯೇ;

ಆ) ಇಲ್ಲವಾದಲ್ಲಿ, ಕಾರಣಗಳೇನು? (ವಿವರ ನೀಡುವುದು);

ಇ) ನಿರುದ್ಯೋಗಿ ಯುವಕರಿಗೆ 500 ರೂ.ಗಳ ಮಾಸಿಕ ಭತ್ಯೆ ಕರುರಾದ ಘೋಷಣೆಯೂ ಜಾರಿಗೆ ಬಂದಿದೆಯೇ;

ಈ) ಇಲ್ಲವಾದಲ್ಲಿ ಕಾರಣಗಳೆನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಸಹಕಾರ ಸಂಸ್ಥೆಗಳ ಮೂಲಯ ರೈತರಿಗೆ ನೀಡಿದ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿರುವುದಿಲ್ಲ. ಆದಾಗ್ಯೂ ದಿನಾಂಕ 1-4-2004ರಿಂದ ಸಹಕಾರ ಸಂಸ್ಥೆಗಳಿಂದ ರೈತರಿಗೆ ಶೇಕಡ 6ರ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಲು ಸರ್ಕಾರವು ಆದೇಶ ಹೊರಡಿಸಿರುತ್ತದೆ.

ಇ) ಸಹಕಾರ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

574(332) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ರೈತರ ಸಾಲದ ಮೇಲಿನ ಬಡ್ಡಿ ಎಷ್ಟು ಮನ್ನಾ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಆ) ಮನ್ನಾ ಮಾಡಿದ ಬಡ್ಡಿ ಬಾಬ್ತು ಜಿಲ್ಲಾವಾರು ಪ್ರಾಥಮಿಕ ಪತ್ತಿನ ಗ್ರಾಮೀಣ ವ್ಯವಸಾಯ ಸಹಕಾರ ಬ್ಯಾಂಕುಗಳಿಗೆ ಸರ್ಕಾರ ಕೊಡಬೇಕಾದ ಮೊತ್ತ 31-3-2004ಕ್ಕೆ ಅನ್ವಯಿಸುವಂತೆ ಎಷ್ಟು ಆ ಮೊತ್ತದಲ್ಲಿ ಇನ್ನೂ ಕೊಡಬೇಕಾದ ಬಾಕಿ ಮೊತ್ತ ಎಷ್ಟು;

ಇ) ರೈತರ ಸಾಲದ ಬಡ್ಡಿ ಮನ್ನಾ ಮಾಡಲು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು (31-3-2004ಕ್ಕೆ ಅನ್ವಯಿಸುವಂತೆ ವಿವರ ನೀಡುವುದು);